ಅ) ವಿದ್ಯುತ್ ಸಂಪರ್ಕಕ್ಕಾಗಿ ಪರಿಶಿಷ್ಟ ಜಾತಿ : ಪಂಗಡದ 29 ಫಲಾನುಭವಿಗಳು ಮತ್ತು ಹಿಂದುಳಿದ ವರ್ಗಗಳ 83 ಫಲಾನುಭವಿಗಳು ಬಾಕಿಯಿರುತ್ತಾರೆ. ಕಡೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ 26 ಫಲಾನುಭವಿಗಳ ಕೊಳವೆ ಬಾವಿಗಳು ಹಾಗೂ ಹಿಂದುಳಿದ ವರ್ಗಗಳ 2 ಕೊಳವೆ ಬಾವಿಗಳು ವಿದ್ಯುದ್ದೀಕರಣಕ್ಕೆ ಬಾಕಿಯಿರುತ್ತದೆ.

4654 (5258) ಶ್ರೀ ಮಾಧುಸ್ವಾಮಿ ಜೆ.ಸಿ. (5258) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮೆಟ್ರೋ ರೈಲಿನ ಯೋಜನೆಯ ಬಗ್ಗೆ ಜಿಜ್ಞಾಸೆ ಇರುವುದು ನಿಜವೇ; ಮೆಟ್ರೋ ರೈಲು ಅಥವಾ ಮೊನೋ ರೈಲು ಇವುಗಳಲ್ಲಿ ರಾಜ್ಯ ಯಾವ ಯೋಜನೆಯನ್ನು ಕೈಗೆತ್ತಿಕೊಳ್ಳುವುದು; ಇದಕ್ಕೆ ಇರುವ ಅಡಚಣೆ ಏನು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ಮೆಟ್ರೋ ರೈಲು ಯೋಜನೆ ಬಗ್ಗೆ ಜಿಜ್ಞಾಸೆ ಇರುವುದಿಲ್ಲ.

ಮೆಟ್ರೋ ರೈಲು ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ನಿರ್ಧರಿಸಿದೆ. ಈಗಾಗಲೇ ಭಾರತ ಸರ್ಕಾರದ ಯೋಜನಾ ಆಯೋಗವು ಈ ಯೋಜನೆಗೆ ತತ್ವಶಃ ಒಪ್ಪಿಗೆಯನ್ನು ನೀಡಿದೆ. ಪಿ.ಐ.ಬಿ. (ಬಂಡವಾಳ ಹೂಡಿಕೆ ಮಂಡಳಿ)ಯ ಪೂರ್ವಭಾವಿ ಸಭೆಯು ತನ್ನ ಒಪ್ಪಿಗೆ ನೀಡಿದೆ. ಕೇಂದ್ರ ಸರ್ಕಾರದಿಂದ ಶೀಘ್ರದಲ್ಲಿಯೇ ಒಪ್ಪಿಗೆ ಬರುವ ನಿರೀಕ್ಷೆ ಇದೆ. ಏತನ್ಮಧ್ಯೆ ಕರ್ನಾಟಕ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ : ನಅಇ 144 ಪಿಆರ್‌ಜೆ 2001 ದಿನಾಂಕ : 24–03–2005ರಲ್ಲಿ ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ–1ರ ಅನುಷ್ಠಾನಕ್ಕಾಗಿ ರೂ.5605/– ಕೋಟಿ ರೂ.ಗಳ ಪರಿಷ್ಕೃತ ಅಂದಾಜು ವೆಚ್ಚಕ್ಕೆ ಅನುಮೋದನೆ ನೀಡಿದೆ. ಪ್ರಾಥಮಿಕ ಕಾರ್ಯಗಳಾದಂತಹ ಯೋಜನೆ ಹಾಗೂ ವಿನ್ಯಾಸ, ಭೂಸ್ವಾಧೀನ ಪಡಿಸಿಕೊಳ್ಳಲು ಸಿದ್ಧತೆ, ಬಳಕೆ ಸೇವೆಗಳ ಸ್ಥಳಾಂತರ, ಇತ್ಯಾದಿ ಆರಂಭಿಕ ಕೆಲಸಗಳನ್ನು ಕೈಗೊಳ್ಳುವುದರೊಂದಿಗೆ ಮುಂದುವರಿಯಲು ಬಿ.ಎಂ.ಆರ್.ಟಿ.ಎಲ್.ಗೆ ಸರ್ಕಾರದ ಅನುಮತಿಯನ್ನು ಸಹ ನೀಡಿದೆ. 2005–06ರ ರಾಜ್ಯ ಸರ್ಕಾರದ ಆಯವ್ಯಯದಲ್ಲಿ 109 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಯೋಜನೆಯನ್ನು 2005ರಲ್ಲಿ ಪ್ರಾರಂಭಿಸಿ 2010ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಈ ಯೋಜನೆಗೆ ಯಾವುದೇ ಅಡಚಣೆ ಇರುವುದಿಲ್ಲ.